# ಹೀಗೊಂದು ಪುಸ್ತಕ ಖರೀದಿ!

ಸಾಮಾನ್ಯವಾಗಿ ನಾವು ಯಾವುದಾದರೂ ಪುಸ್ತಕ ಕೊಳ್ಳಲು ಹೋದಾಗ ಅಲ್ಲಿ ಒಬ್ಬ ಪುಸ್ತಕ ವ್ಯಾಪಾರಿ ಇರುತ್ತಾನೆ. ಆತ ಮಾರಾಟವಾದ ಪುಸ್ತಕದ ಬೆಲೆ ತೆಗೆದುಕೊಳ್ಳುತ್ತಾನೆ. ಆದರೆ ಇತ್ತೀಚೆಗೆ ನಡೆದ ಪುಸ್ತಕ ಮಾರಾಟದ ಪ್ರಸಂಗ ಎಲ್ಲರನ್ನೂ ಅಚ್ಚರಿಗೊಳಿಸಿತ್ತು.

ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ 'ಕಾವ್ಯ ಕಮ್ಮಟ'ಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಪ್ರೊ. ಕಾಶೀನಾಥ ಅಂಬಲಗೆ ಅವರು ತಮ್ಮ ಚೀಲದಲ್ಲಿದ್ದ 20–30 ಸಾಹಿತ್ಯಕ ಪುಸ್ತಕಗಳನ್ನು ಶಾಲು ಹಾಕಿ ಜೋಡಿಸಿದರು. ಶೇ. 50 ರಿಯಾಯಿತಿ ಎಂಬ ಬೋರ್ಡ್ ಇಟ್ಟರು. ವಿಶೇಷವೆಂದರೆ ಒಂದು ಪುಟ್ಟ ಡಬ್ಬಿ ಇಟ್ಟು 'ನೀವೇ ಖರೀದಿಸಿ– ಹಣ ಇದರಲ್ಲಿ ಹಾಕಿ' ಎಂದು ಕಾರ್ಯಕ್ರಮಕ್ಕೆ ಹೋದರು. ಜನರಿಗೆ ಸಾಹಿತ್ಯ ತಲುಪಲಿ ಎಂಬ ಉದ್ದೇಶದಿಂದ ಹೋದ ಕಡೆಯೆಲ್ಲ ಈ ರೀತಿ ಮಾಡುತ್ತಾರೆ. ಓದುಗರೂ ಸಹ ಇದಕ್ಕೆ ಸ್ಪಂದಿಸಿದ್ದು, ಇದುವರೆಗೆ ಪುಸ್ತಕ ಕಳ್ಳತನವಾಗಿಲ್ಲವಂತೆ.

**-ಈರಣ್ಣ ಬೆಂಗಾಲಿ, ರಾಯಚೂರು**





# ಕಾಗದದ ಬುಟ್ಟಿ

ಚಿತ್ರದಲ್ಲಿ ಕಾಣುತ್ತಿರುವ ಹೂವಿನ ಸಿಬ್ಬು ಅಂದರೆ ಹೂವಿನ ಬುಟ್ಟಿ ಬಣ್ಣ ಬಣ್ಣದ ಡ್ರಾಯಿಂಗ್ ಹಾಳೆಗಳಿಂದ ಮಾಡಿದ್ದು. ಇದು ಸಾಗರ ತಾಲ್ಲೂಕಿನ ಉಪ್ಪಳ್ಳಿಯ ಅಂಜಲಿಯ ಕೈಚಳಕದಿಂದ ಮೂಡಿಬಂದಿದೆ. ಮನೆಯ ಅಲಂಕಾರವನ್ನು ಹೆಚ್ಚಿಸುವ ಇಂತಹ ಕಲಾಕೃತಿಗಳನ್ನು ತಯಾರಿಸುವುದರಲ್ಲಿ ಅವರು ಸಿದ್ಧಹಸ್ತರು.

**-ವಿ.ಸಿ. ಪಾಟೀಲ, ಸಾಗರ**

# ವಿಶಿಷ್ಟ ಪ್ರತಿಮೆ

ಶಿರಸಿ ಹತ್ತಿರದ ಹುಲೇಕಲ್‌ನಲ್ಲಿರುವ ಲಕ್ಷ್ಮೀನಾರಾಯಣ ದೇವಾಲಯ ವ್ಯಾಸರಾಜರಿಂದ ಪ್ರತಿಷ್ಠಾಪಿಸಲ್ಪಟ್ಟಿದೆ. ಇಲ್ಲಿ ಲಕ್ಷ್ಮಿಯು ನಾರಾಯಣನ ಎಡ ತೊಡೆ ಮೇಲೆ ಕುಳಿತು ಕೈಯಲ್ಲಿ ಮೊಸರನ್ನದ ತುತ್ತು ಹಿಡಿದುಕೊಂಡು, ಒಂದು ಕಣ್ಣಿನಿಂದ ದೇವರ ವಕ್ಷಸ್ಥಳ, ಮತ್ತೊಂದು ಕಣ್ಣಿನಿಂದ ವೈಕುಂಠ ನೋಡುವ ದೃಶ್ಯ ಅದ್ಭುತ. ಶಿಲ್ಪಿಯ ಕೈಚಳಕ ನೋಡುವುದೇ ಸೊಗಸು!

**– ಶ್ರೀಧರ ರಾಯಸಂ, ಬೆಂಗಳೂರು**

